ಅತ್ಯಂತ ಹಳೆಯ ಮೂರನೇ ಗಡಿಯಾರ; ಇಂದಿಗೂ ಸುಸ್ಥಿತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ 'ಏಕೈಕ ಹಳೆಯ ಗಡಿಯಾರ.' ಜಗತ್ತಿನಲ್ಲಿ ಇಂಥ ಗಡಿಯಾರಗಳಿದ್ದರೂ, 'ಅತ್ಯಂತ ಕಲಾತ್ಮಕವಾಗಿ ಅಲಂಕೃತಗೊಂಡಿರುವ ಪುರಾತನ ಖಗೋಳ ಗಡಿಯಾರ ನೋಡಬೇಕೆಂದರೆ ಪ್ರಾಗ್ ಸಿಟಿಗೇ ಹೋಗಬೇಕು' ಎನ್ನುವುದು ಕಲಾರಸಿಕರು, ಗಡಿಯಾರಪ್ರಿಯರ ಅಂಬೋಣ. ಇದರ ಹುಟ್ಟು 1410ರಲ್ಲಾದರೂ, ಮುಂದಿನ ವರ್ಷಗಳಲ್ಲಿ ಟವರ್ ಮುಂಭಾಗದ ಗೋಥಿಕ್ ವಿನ್ಯಾಸ, ಸ್ವರ್ಣಖಚಿತ ಖಗೋಳದ 'ಡಯಲ್', ಕ್ರಿಸ್ತನ ಶಿಷ್ಯರು – ಅಸ್ಥಿಪಂಜರ – ಸಾವಿನ ಸಂಕೇತಗಳ ಬೊಂಬೆ ಶೋ, ಕಟ್ಟಿಗೆಯ ಕಲಾಕೃತಿಗಳು, ಕ್ಯಾಲೆಂಡರ್ ಡಿಸ್ಕ್ – ಹೀಗೆ ವೈವಿಧ್ಯದ ಮತ್ತಷ್ಟು ಭಾಗಗಳ ಆಗಾಗ ಸೇರ್ಪಡೆಯಾಗಿದೆ.

ಪ್ರಾಗ್ ಸಿಟಿಯಲ್ಲಿ ಓಲ್ಡ್ ಸಿಟಿಯ ವಿಸ್ತಾರವಾದ ಚೌಕದಲ್ಲಿದೆ 'ಓಲ್ಡ್ ಟೌನ್‌ಹಾಲ್'. ಆ ಕಟ್ಟಡದ ಗೋಡೆಯಲ್ಲಿ ವಿರಾಜಮಾನವಾಗಿದೆ ಈ 'ಖಗೋಳ ಗಡಿಯಾರ'. ಇದರಲ್ಲಿ ಸಮಯ ತೋರಿಸುವ ಉದ್ದನೆಯ ಹೊಳೆವ ಮುಳ್ಳುಗಳು, ತಾರಾಮಂಡಲದ ಅನೇಕ ಸಂಕೀರ್ಣ ಸಂಗತಿಗಳನ್ನು ತಿಳಿಸುವ ವರ್ಣಮಯ ಚಕ್ರಗಳೂ ಇವೆ.

## ಗಡಿಯಾರದ ಕೆಲಸವೇನು?

ಪ್ರಾಗ್‌ನ ಖಗೋಳ ಗಡಿಯಾರ ದೈನಂದಿನ ಸಮಯದೊಂದಿಗೆ, ರಾಶಿಚಕ್ರ, ಚಿಹ್ನೆಗಳು, ಗ್ರಹಣಗಳ ಗುರುತಿಸುವಿಕೆ, ಆಕಾಶಕಾಯಗಳ ದೈನಂದಿನ ಚಲನವಲನ, ಸ್ಥಿತಿಗತಿ – ಹೀಗೆ ಅನೇಕ ಮಾಹಿತಿ ನೀಡುತ್ತದೆ. ಗೋಡೆಯುದ್ದಕ್ಕೂ ನಿಂತಿರುವ ಗಡಿಯಾರದ ಕೆಳಭಾಗ ಕೇವಲ 'ಕ್ಯಾಲೆಂಡರ್ ಡಯಲ್' (ದಿನಸೂಚಿ ವೃತ್ತ) ಆಗಿದ್ದು, ದಿನವನ್ನು ತಿಳಿಸುತ್ತದೆ ಮತ್ತು ರಾಶಿಚಕ್ರಗಳ ಚಿಹ್ನೆಗಳನ್ನು ಹೊಂದಿದೆ. 1490ರಲ್ಲಿ ರಚನೆಯಾದ ಈ ಡಯಲ್, ಮೊದಲು ಮಾನವ ಚಾಲಿತವಾಗಿತ್ತು; 1566ರ ಹೊತ್ತಿಗೆ ಯಂತ್ರಚಾಲಿತವಾಗಿ ಬದಲಾಯಿತು. ಮೇಲಿನ ಡಯಲ್ ಬಹಳ ಸಂಕೀರ್ಣವಾದ ಕಾರ್ಯಬಾಹುಳ್ಯದ್ದು. ಸರಳೀಕರಿಸಿದ ಪ್ಲಾನೆಟೇರಿಯಂ (ತಾರಾಲಯ) ರೀತಿಯ ಕಾರ್ಯವನ್ನು ನಿರ್ವಹಿಸುತ್ತದೆ. ಆಕಾಶದಲ್ಲಿರುವ ಸಕಲ ತಾರಾಗ್ರಹಗಳ ಕುರಿತೂ ವಿವರಣೆ ನೀಡುತ್ತದೆ. ನಡುವಿನಲ್ಲೊಂದು ನೀಲಿ ವೃತ್ತವಿದ್ದು ಅದು ಭೂಮಿಯನ್ನು ಪ್ರತಿನಿಧಿಸುತ್ತದೆ. ಸೂರ್ಯ, ಚಂದ್ರರನ್ನು ಪ್ರತಿನಿಧಿಸುವ ಎರಡು ಬಾಹುಗಳು, ರೋಮನ್ ಮತ್ತು ಅರೇಬಿಕ್ ಅಂಕಿಗಳೂ ಇವೆ.

ಗಡಿಯಾರದ ಮೇಲ್ಭಾಗದಲ್ಲಿ, ಬೆಳಿಗ್ಗೆ 9ರಿಂದ ರಾತ್ರಿ 9ರವರೆಗೆ ಗಂಟೆಗೊಮ್ಮೆ 'ಡಾಲ್ ಶೋ' ಒಂದರ ಪ್ರದರ್ಶನವಾಗುತ್ತದೆ. ಅದನ್ನು ನೋಡಲು ನೂರಾರು ಪ್ರವಾಸಿಗರು ಕಾದು ನಿಂತಿರುತ್ತಾರೆ. ಗಂಟೆ ಹೊಡೆಯುತ್ತಿದ್ದಂತೆ ಮೇಲ್ಭಾಗದ ಎರಡು ಕಿಟಕಿಗಳು ರೆಕ್ಕೆಗಳಂತೆ ಒಳಹಾರಿ ತೆರೆದುಕೊಂಡಾಗ, ಒಂದೊಂದೇ ಬೊಂಬೆಗಳು ಕಿಟಕಿಯ ಬಳಿ ಬಂದುಹೋಗುತ್ತವೆ. ಏಸುಕ್ರಿಸ್ತನ ಹನ್ನೆರಡು ಮಂದಿ ಶಿಷ್ಯರು ಕೈಯಲ್ಲಿ ಕ್ರಾಸ್, ಬೈಬಲ್ ಇತ್ಯಾದಿಗಳ ಹಿಡಿದು ಚಕ್ರವೊಂದರಲ್ಲಿ ತಿರುಗುತ್ತಿದ್ದರೆ, ಹಿಂದೆ ಅಸ್ಥಿಪಂಜರ ಮತ್ತು ಸಾವಿನ ದೇವತೆಯೊಂದು ಮರಣಗಂಟೆಯನ್ನು ಹಿಡಿದು 'ಗಣಗಣ' ಬಾರಿಸುತ್ತಾ ಕಾಣಿಸಿಕೊಳ್ಳುತ್ತಾರೆ.

ಅಸಾಮಾನ್ಯ ಗಡಿಯಾರದ ಇನ್ನೊಂದು ವಿಶೇಷವೋ ಕೊರತೆಯೋ ಗೊತ್ತಿಲ್ಲ – ವಿಶ್ವದ ಯಾವುದೇ ಭಾಗದಲ್ಲಿ ಅದನ್ನು ಇಟ್ಟರೂ, ಅದು ಪ್ರಾಗ್ ನೆಲದ ಕೋನದಿಂದಲೇ ಖಗೋಳದ ಚಲನವಲನಗಳನ್ನು ಗುರುತಿಸಿ ದಾಖಲಿಸುವುದಂತೆ; ಸಮಯ – ದೂರ – ಸೂರ್ಯೋದಯ – ಸೂರ್ಯಾಸ್ತ ಇತ್ಯಾದಿಗಳನ್ನು.

ಗಡಿಯಾರದ ಕೆಲಸ ಏನಿದೆಯೋ ಅದು ನಮಗೆ ಇಂದಿನ ಕಾಲದಲ್ಲಿ ಬಹಳ ಸುಲಭವಾಗಿ ಸಿಗುವಂತಹ ಮಾಹಿತಿಯಾಗಿದೆ, ತಂತ್ರಜ್ಞಾನ ಅಷ್ಟು ಮುಂದುವರೆದಿದೆ. ಆದರೆ, ತಂತ್ರಜ್ಞಾನ ಅಷ್ಟೇನೂ ಬಳಕೆಯಲ್ಲಿಲ್ಲದ ಶತಶತಮಾನಗಳ ಹಿಂದೆ ಹೀಗೊಂದು ಸಂಕೀರ್ಣ ಗಡಿಯಾರದ ನಿರ್ಮಾಣ, ಅತ್ಯಾಧುನಿಕ ತಂತ್ರಜ್ಞಾನದ ನೆಲೆಗಟ್ಟಲ್ಲಿ ಎಂದರೆ ತೀರಾ ಅಚ್ಚರಿಯ, ಅತ್ಯದ್ಭುತ ಸಂಗತಿಯೇ ಸರಿ. ಕಾಲಕಾಲಕ್ಕೆ ಒಂದಷ್ಟು ದುರಸ್ತಿಗೆ ಒಳಗಾಗಿದೆಯಾದರೂ, ಈಗಲೂ ಗಡಿಯಾರ ಸಮರ್ಥವಾಗಿ ಕಾರ್ಯ ನಿರ್ವಹಿಸುತ್ತಿದೆ.


ಪ್ರಾಗ್ ನಗರದ ಪಕ್ಷಿನೋಟ

## ಗಡಿಯಾರದ ಜನಕರು

ಖಗೋಳದ ಮಾಹಿತಿಗಳನ್ನೆಲ್ಲಾ ನಿಖರವಾಗಿ ತಿಳಿಸುವ ಈ ಗಡಿಯಾರ, ಪಾಪ, ತನ್ನ ಸ್ಥಾಪನೆ ಇಂಥದ್ದೇ ಸಮಯದಲ್ಲಾಯ್ತು ಎನ್ನುವ ಖಚಿತ ಮಾಹಿತಿ ಕೊಡುವಲ್ಲಿ ಒಂದಷ್ಟು ಗೊಂದಲಗಳನ್ನು ಹೊಂದಿದೆ. ಹೀಗಿದ್ದರೂ, ಇದನ್ನು ನಿರ್ಮಿಸಿದವರ ವಿಷಯದಲ್ಲಿ ಗೊಂದಲವಿಲ್ಲ. ಮೊದಲಿಗೆ 'ಮಿಕುಲಾಸ್ ಆಫ್ ಕದಾನ್' ಮತ್ತು 'ಜಾನ್ ಸಿಂದೆಲ್' ಎನ್ನುವ ಗಣಿತಜ್ಞ, ಖಗೋಳಶಾಸ್ತ್ರದ ಪ್ರೊಫೆಸರ್‌ಗಳು ಹೀಗೊಂದು ವಿಸ್ಮಯ ಗಡಿಯಾರದ ನಿರ್ಮಾಣಕ್ಕೆ ಕೈ ಹಾಕಿದವರು. ಮುಂದೆ ಹಲವು ಕೈಗಳು ಆ ಕಾರ್ಯದಲ್ಲಿ ಕೈಗೂಡಿಸಿವೆ. ಗಡಿಯಾರದ ಕುರಿತೇ ಪ್ರವಾಸವೂ ಇದೆ. ಒಳಗೆ ಇದರ ಕಾರ್ಯವೈಖರಿ, ಬೊಂಬೆ ಶೋ ಇತ್ಯಾದಿಗಳನ್ನು ಒಂದೊಂದು ಯಂತ್ರ ಕೋಣೆಯೊಳಗೇ ಹೋಗಿ ನೋಡಬಹುದು. ಇದಕ್ಕೆ ಟಿಕೆಟ್ ಕೊಳ್ಳಬೇಕು.

ಖಗೋಳ ಗಡಿಯಾರ ನಾಝಿಗಳ ಕಾಲದಲ್ಲಿ ಸಾಕಷ್ಟು ಹಾನಿಗೊಳಗಾಗಿತ್ತು. ರಿಪೇರಿಗೂ ಮೈ ಒಡ್ಡಿತ್ತು. ಆದರೂ ಅಡಿಪಾಯ ಭದ್ರವಿರುವುದರಿಂದ, 600 ವರ್ಷಗಳ ವೈಭವದ ವಾರ್ಷಿಕೋತ್ಸವವನ್ನೂ ಆಚರಿಸಿಕೊಂಡು ಪ್ರಾಗ್‌ನ ಹೆಮ್ಮೆಯ ಪ್ರತೀಕವಾಗಿ, ಪ್ರವಾಸಿಗರ ಕಣ್ಮಣಿಯಾಗಿದೆ. ಇಂಥದ್ದು ಇನ್ನೊಂದು ಗಡಿಯಾರ ನಿರ್ಮಾಣವಾಗಬಾರದೆಂದು ಪ್ರಾಗ್ ಪುರಸಭೆ ಎಣಿಸಿದ್ದರೂ, 'ಸಿಯೋಲ್' ನಗರದಲ್ಲಿ 'ಕ್ಯಾಸಲ್ ಪ್ರಾಹಾ ಹಾಂಗ್‌ಡೇ' ಎಂಬ ಕಟ್ಟಡವೊಂದು ನಿರ್ಮಾಣವಾಗಿ, ಅಲ್ಲಿ ಈ ಗಡಿಯಾರದ ಪ್ರತಿಕೃತಿಯೊಂದರ ಸ್ಥಾಪನೆಯಾಗಿದೆ. ಆದರೂ ಪ್ರಾಗ್‌ನ ಗಡಿಯಾರದ ಪ್ರಾಚೀನತೆ–ಸೊಬಗಿನ ಮುಂದೆ ಉಳಿದವುಗಳೆಲ್ಲ ಎರಡನೆಯವೇ.

ಪ್ರತಿಕ್ರಿಯಿಸಿ: feedback@sudha.co.in